<u>ದಿನಾಂಕಃ **07-02-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಶ್ರೀ ಜೆ.ವಿ., ಆರೋಪಿ ಪರ ವಕೀಲರಿಂದಃ</u>

**6.** ವಾಗೀಶ ನಗರ, ರಾಣೇಬೆನ್ನೂರನಲ್ಲಿ ಖಾಯಂ ವಾಸಿಯಾಗಿರುತ್ತೀರಿ ಅಂದರೆ ಈಗ ವಾಸವಾಗಿರುತ್ತೇವೆ. ನನಗೆ ಮದುವೆಯಾಗಿ 35 ವರ್ಷ ಆಗಿರುತ್ತದೆ. ನಿಮ್ಮ ಆಧಾರ ಕಾರ್ಡ, ವೋಟರ ಐಡಿ ನಿಮ್ಮ ವಾಗೀಶ ನಗರದು ಇದೆ ಅಂದರೆ ಹೌದು. ನಿಮ್ಮ ಬ್ಯಾಂಕ್ ಖಾತೆ ಕೂಡಾ ರಾಣೇಬೆನ್ನೂರ ಶಾಖೆಯಲ್ಲಿ ಇದೆ ಅಂದರೆ ಹೌದು. ನೀವು ರಾಣೇಬೆನ್ನೂರಲ್ಲಿ 35 ವರ್ಷಗಳಿಂದ ವಾಸವಾಗಿರುತ್ತೀರಿ ಅಂದರೆ ಇಲ್ಲಾ, ನಾನು 15 ವರ್ಷದಿಂದ ರಾಣೇಬೆನ್ನೂರನಲ್ಲಿ ವಾಸವಾಗಿರುತ್ತೇನೆ. ಅದಕ್ಕಿಂತ ಪೂರ್ವದಲ್ಲಿ ಹಾವೇರಿಯ ನನ್ನ ತಾಯಿಯ ಮನೆಯಲ್ಲಿ ವಾಸವಾಗಿರುತ್ತೇನೆ. ರಾಣೇಬೆನ್ನೂರನಲ್ಲಿ ಮನೆ ಮಾಡಿ 15 ವರ್ಷ ಆಗಿರುತ್ತದೆ. ನನ್ನ ಆರೋಗ್ಯದ ಸಮಸ್ಯೆಯಿಂದ ಹಾವೇರಿಯ ನನ್ನ ತಾಯಿಯ ಮನೆಯಲ್ಲಿ ಇರುತ್ತೇನೆ. ನಿಮ್ಮ ಫಿರ್ಯಾದಿಯಲ್ಲಿ ನಿಮ್ಮ ವಿಳಾಸವನ್ನು ವಾಗೀಶ ನಗರ, ರಾಣೇಬೆನ್ನೂರ ಖಾಯಂ ವಾಸ ರಾಣೇಬೆನ್ನೂರ ಅಂತಾ ಕೊಟ್ಟಿರುತ್ತೀರಿ ಅಂದರೆ ಆರೋಗ್ಯದ ಸಲುವಾಗಿ ಬರುವುದು ಹೋಗುವುದು ಮಾಡುತ್ತೇವೆ. ಖಾಯಂವಾಗಿ ನೀವು ರಾಣೇಬೆನ್ನೂರನಲ್ಲಿ ವಾಸವಾಗಿರುತ್ತೀರಿ ಅಂದರೆ ನನ್ನ ಎರಡು ಮಕ್ಕಳು ಹಾವೇರಿಯಲ್ಲಿ 1 ನೇ ತರಗತಿ ಹಾಗೂ 2 ನೇ ತರಗತಿ ಓದುತ್ತಿದ್ದರು. ನನ್ನ ಮಕ್ಕಳಿಗೆ ಈಗ ದೊಡ್ಡವಳಿಗೆ 33 ವರ್ಷ, 32 ವರ್ಷ, 30 ವರ್ಷ ವಯಸ್ಸು ಇರುತ್ತದೆ.

**7.** ನಿಮ್ಮ ಮಗಳು ವಿದ್ಯಾಭ್ಯಾಸ ಮಾಡುವಾಗ ಬ್ಯಾಂಕಿನಲ್ಲಿ ಲೋನ ತೆಗೆದುಕೊಂಡಿರುತ್ತಾಳೆ. ಆಕೆ ಬೆಂಗಳೂರಿನಲ್ಲಿ ಓದುತ್ತಿರುವಾಗ ಪೇಯಿಂಗ ಗೆಸ್ಟನಲ್ಲಿ ಇರುತ್ತಾರೆ ಅಂದರೆ ಹೌದು. ವಿದ್ಯಾಭ್ಯಾಸಕ್ಕಾಗಿ ತೆಗೆದುಕೊಂಡ ಲೋನನ್ನು ಎಷ್ಟು ಕಟ್ಟುತ್ತಿದ್ದಾರೆ ಅಂದರೆ ಗೊತ್ತಿಲ್ಲ. ತಿಂಗಳಿಗೆ ಎಷ್ಟು ಖರ್ಚು ಬರುತ್ತಿತ್ತು ಅಂತಾ ಈಗ ನೆನಪಿಲ್ಲ, ಅದೆಲ್ಲಾ ಖರ್ಚು ವೆಚ್ಚಗಳನ್ನು ನನ್ನ ಗಂಡ ನೋಡಿಕೊಳ್ಳುತ್ತಿದ್ದರು. ನಿಮ್ಮ ಬ್ಯಾಂಕ ಸ್ಟೇಟಮೆಂಟ ಪ್ರಕಾರ ನಿಮ್ಮ ಮಗಳ

ವೇತನ ರೂ. 30,985/- ಇದೆ ಅಂದರೆ ಇರಬಹುದು. ವಿದ್ಯಾಭ್ಯಾಸದ ಲೋನನ್ನು ನನ್ನ ಗಂಡ ತುಂಬುತ್ತಿದ್ದು ಮಕ್ಕಳು ತುಂಬುತ್ತಿರಲಿಲ್ಲ. ನಿಮ್ಮ ಮಗಳು ಎಷ್ಟು ಎಷ್ಟು ಹಣವನ್ನು ಬ್ಯಾಂಕಗೆ ಹಾಕುತ್ತಿದ್ದಳು ಅಂದರೆ, ನನ್ನ ಮಗಳು ಬ್ಯಾಂಕಗೆ ಜಮೆ ಮಾಡುತ್ತಿರಲಿಲ್ಲ ಬಂದಾಗ ಹಣ ಕೊಡುತ್ತಿದ್ದಳು. ನಿಮ್ಮ ಮಗಳು ದೀಪು ನಿಮಗೆ ಎಷ್ಟು ಎಷ್ಟು ಹಣ ಕೊಟ್ಟಿರುತ್ತಾರೆ ಅಂದರೆ ಮದುವೆಗೆ ಅಂತಾ ಹೇಳಿ ರೂ.75000/-, 50000/-, 25000/- ಅಂತಾ ಕೊಟ್ಟಿರುತ್ತಾರೆ. ಎರಡು ವರ್ಷದಲ್ಲಿ ನಿಮ್ಮ ಮಗಳು ಯಾವ್ಯಾವ ತಿಂಗಳು ಎಷ್ಟೇಷ್ಟು ಹಣ ಕೊಟ್ಟಿರುತ್ತಾಳೆ ಎಂಬುದು ನೆನಪಿರುವುದಿಲ್ಲ. ಹಣವನ್ನು ಮನೆಯಲ್ಲಿ ಇಟ್ಟಿದ್ದೆ. ಎರಡು ವರ್ಷದಲ್ಲಿ ನಿಮ್ಮ ಮಗಳಿಗೆ ಅಷ್ಟೊಂದು ಹಣ ಇರಲಿಲ್ಲ, ಆದ್ದರಿಂದ ನಿಮ್ಮ ಬಳಿ ಅಷ್ಟು ಹಣ ಇರಲಿಲ್ಲ ಅಂದರೆ ಸರಿಯಲ್ಲ. ನಿಮ್ಮ ವೈಯಕ್ತಿಕ ಹೆಸರಿನಲ್ಲಿ ಯಾವುದೇ ಆಸ್ತಿ ಇರುವುದಿಲ್ಲ ಅಂದರೆ ಸರಿ. ನನ್ನ ಗಂಡ ಮಕ್ಕಳ ಹೆಸರಿನಲ್ಲಿ ಆಸ್ತಿ ಇರುತ್ತದೆ. ಆರೋಪಿಗೆ ಅವರ ತಾಯಿಯ ಮನೆ ಕಡೆಯಿಂದ ಆಸ್ತಿ ಬಂದಿದ್ದು ಅದರ ರಿಪೇರಿಗಾಗಿ ಹಣ ಕೇಳಿದ್ದು, ವೈಯಕ್ತಿಕವಾಗಿ ನೀವು ನೋಡಿದ್ದೀರಾ ಅಂದರೆ ಇಲ್ಲಾ, ವೈಯ ಕ್ತಿಕವಾಗಿ ಕಾಗದ ಪತ್ರಗಳನ್ನು ನೋಡಿರುತ್ತೀರಾ ಅಂದರೆ ನೋಡಿರುವುದಿಲ್ಲ, ನಂಬಿಕೆ ವಿಶ್ವಾಸ ಇರುತ್ತದೆ. ರೂ. 6,90,000/- ಗಳ ಹಣವನ್ನು ಆರೋಪಿಗೆ ನೀಡಿರುತ್ತೇನೆ ಅಂತಾ ಹೇಳಿದ್ದು ಅದರಲ್ಲಿ ರೂ. 100/- ಹಾಗೂ 500/- ಮುಖ ಬೆಲೆಯದು ಎಷ್ಟು ಇತ್ತು ಅಂತಾ ಹೇಳುವುದಿಲ್ಲ. ನಿಮಗೆ ರೂ. 7.00 ಲಕ್ಷ ಹಣವನ್ನು ಎಣಿಸಲಾಗುತ್ತದೆ ಅಂದರೆ ಎಣಿಸುತ್ತೇನೆ, ನಿಮಗೆ ಯಾವುದೇ ಹಣವನ್ನು ಎಣಿಸಲು ಬರುವುದಿಲ್ಲ ಅಂದರೆ ಸರಿಯಲ್ಲ.

**8.** ಗಿರಿಜವ್ವ ನನ್ನ ತಾಯಿ. ವನಜಾಕ್ಷಿ ಎಂಬುವವರು ಗೊತ್ತಿರುವುದಿಲ್ಲ. ಆರೋಪಿಗೂ ನಿಮಗೂ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಅಂದರೆ ಸರಿಯಲ್ಲ. ನೀವು ಆರೋಪಿಗೆ ಯಾವುದೇ ರೀತಿಯ ಹಣವನ್ನು ನೀಡಿರುವುದಿಲ್ಲ ಅಂದರೆ ಸರಿಯಲ್ಲ. ಯಾವುದೇ ಹಣದ ವ್ಯವಹಾರ ಆಗದೇ ಇದ್ದರೂ ಕೂಡಾ ಹಣಕಾಸಿನ ವ್ಯವಹಾರ ನನ್ನ ಮತ್ತು ಆರೋಪಿ ಮಧ್ಯ ಆಗಿದೆ ಅಂತಾ ಹೇಳಿ ಸುಳ್ಳು

ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಿಮ್ಮ ತಾಯಿ ಮತ್ತು ಆರೋಪಿಯ ನಡುವೆ ಒಡನಾಟು ಇತ್ತು ಅಂದರೆ ಸರಿ. ಮುಂದುವರೆದು ನನ್ನ ಜೊತೆಯು ಸಹ ಒಡನಾಟ ಇತ್ತು ಅಂತಾ ನುಡಿಯುತ್ತಾರೆ. ನಿಮ್ಮ ತಾಯಿ ಆರೋಪಿಯ ಮನೆಗೆ ಹೋಗಿ-ಬಂದು ಮಾಡುತ್ತಿದ್ದರು ಅಂದರೆ ಸರಿ. ನಿಪಿ-1 ಚೆಕನ ಮೇಲಿರುವ ಸಹಿ ಆರೋಪಿಯದು ಅಲ್ಲಾ ಅಂದರೆ ಅವರೇ ಮಾಡಿಕೊಂಡು ಬಂದು ಕೊಟ್ಟಿರುತ್ತಾರೆ. ಆರೋಪಿಯ ಮನೆಗೆ ನಿಮ್ಮ ತಾಯಿ ಹೋದಾಗ ಅವರ ಚೆಕ್‌ನ್ನು ತಂದು ನಿಮ್ಮ ಕೈಯಲ್ಲಿ ಕೊಟ್ಟು ಈ ಕೇಸ ಹಾಕಿಸಿರುತ್ತಾರೆ ಅಂದರೆ ಆರೋಪಿಯೇ ಚೆಕ್‌ನ್ನು ಕೊಟ್ಟಿರುತ್ತಾರೆ. ಆರೋಪಿ ಯಾವುದೇ ಸಹಿ ಬರವಣಿಗೆ ಮಾಡದೇ ಚೆಕ್‌ನ್ನು ತಾವೇ ಬರವಣಿಗೆ ಮಾಡಿಕೊಂಡು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಅಂದರೆ ಸರಿಯಲ್ಲ, ಆರೋಪಿಯೇ ಬರೆದು ಚೆಕ್ ಕೊಟ್ಟಿರುತ್ತಾರೆ ಅಂತಾ ನುಡಿಯುತ್ತಾರೆ. ಆರೋಪಿಗೆ ನೀವು ರೂ. 6,90,000/- ಹಣವನ್ನು ಕೊಟ್ಟಿರುವುದಿಲ್ಲ ಅದೇ ರೀತಿಯಾಗಿ ಆರೋಪಿ ನಿಮಗೆ ಯಾವುದೇ ಚೆಕ್ ಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ನಾವು ದುಡ್ಡು ಕೊಟ್ಟಿದ್ದಕ್ಕೆ ಆರೋಪಿ ಚೆಕ್ ಕೊಟ್ಟಿರುತ್ತಾರೆ. ನೀವು ಆರೋಪಿಗೆ ಯಾವುದೇ ರೀತಿಯ ನೋಟಿಸ ಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ನಿಮಗೆ ಯಾವುದೇ ಹಣಕಾಸು ನೀಡುವ ಸಾಮರ್ಥ್ಯ ಇರುವುದಿಲ್ಲ ಅಂದರೆ ಸರಿಯಲ್ಲ. ನೀವು ಹೇಳಿದ ಹಾಗೆ ಆರೋಪಿಗೆ ಯಾವುದೇ ರೀತಿ ಹಣಕಾಸಿನ ಸಮಸ್ಯೆ ಇರುವುದಿಲ್ಲ ಅಂದರೆ ಮನೆಯ ರಿಪೇರಿಗೆ ಅಂತಾ ಹೇಳಿ ಹಣ ಪಡೆದಿರುತ್ತಾರೆ. ರೂ. 20,000/- ಕ್ಕಿಂತ ಹೆಚ್ಚಿನ ಮೊತ್ತವನ್ನು ಖಾತೆಯ ಮೂಲಕ ಕೊಡಬೇಕು ಅಂದರೆ ಗೊತ್ತಿರುವುದಿಲ್ಲ. ನೀವು ಆರೋಪಿಯ ಚೆಕ್‌ನ್ನು ಸೃಷ್ಠಿ ಮಾಡಿಕೊಂಡು ಖೊಟ್ಟಿ ಕೇಸನ್ನು ದಾಖಲು ಮಾಡಿರುತ್ತೀರಿ ಅಂದರೆ ಸರಿಯಲ್ಲ. ಆರೋಪಿಯು ನಿಮಗೆ ಯಾವುದೇ ಬಾಕಿ ಹಣ ಕೊಡುವುದು ಇರುವುದಿಲ್ಲ ಅಂದರೆ ಸರಿಯಲ್ಲ.
ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**-ಸಹಿ- 07-02-2025**

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.

C.C. 381/2023
ಪಿಡಬ್ಲ್ಯೂ-1